# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಯು.ಹೆಚ್.ಮಂಡಿಸೊಪ್ಪಿ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಗದಗ ಇವರ ವಿರುದ್ಧ ಶಿಸ್ತು ಕ್ರಮ – ದಂಡನೆ ವಿಧಿಸುವ ಬಗ್ಗೆ – ಆದೇಶ.

ಓದಲಾಗಿದೆ:-

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 76 ಇಎನ್‌ಕ್ಯೂ 2016, ದಿನಾಂಕ 23.08.2016.
2. ಅಪರ ನಿಬಂಧಕರು ವಿಚಾರಣೆಗಳು-9, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ಇವರ ಇಲಾಖಾ ವಿಚಾರಣೆ ವರದಿ ಸಂಖ್ಯೆ: UPLOK-1/DE/336/2016/ARE-9 ದಿನಾಂಕ 11.07.2018
3. ಮಾನ್ಯ ಉಪ ಲೋಕಾಯುಕ್ತ-1 ರವರ ಶಿಫಾರಸ್ಸು ವರದಿ ಸಂಖ್ಯೆ: UPLOK-1/DE/336/2016/ARE-9, ದಿನಾಂಕ 16.07.2018.
4. 2ನೇ ಕಾರಣ ಕೇಳುವ ನೋಟೀಸ್ ಸಂಖ್ಯೆ ಗ್ರಾಅಪ 62 ಇಎನ್‌ಕ್ಯೂ 2018, ದಿನಾಂಕ 31.07.2018
5. ಶ್ರೀ ಯು.ಹೆಚ್.ಮಂಡಿಸೊಪ್ಪಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರ ಲಿಖಿತ ವಿವರಣೆ ದಿನಾಂಕ 30.08.2018

*****

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ: (1) ರಲ್ಲಿ ಓದಲಾದ ದಿನಾಂಕ 23.08.2016ರ ಸರ್ಕಾರದ ಆದೇಶದಲ್ಲಿ ಗದಗ ತಾಲ್ಲೂಕು, ಚಿಂಚಲಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಚಿಂಚಲಿ, ಕಲ್ಲೂರು ಮತ್ತು ನೀಲಗುಂದ ಗ್ರಾಮಗಳಲ್ಲಿ ಕೈಗೊಂಡಿರುವ 4 ಕಾಮಗಾರಿಗಳಾದ ಕಲ್ಲೂರು – ಯತ್ನಳ್ಳಿ ರಸ್ತೆ ಕಾಮಗಾರಿ, ಕಲ್ಲೂರು ಅಂಬೇಡ್ಕರ್ ಭವನದ ಹತ್ತಿರ ರಂಗಮಂದಿರ ನಿರ್ಮಾಣ ಕಾಮಗಾರಿ, ಕಲ್ಲೂರು ಗ್ರಾಮದ ಮಾಲತೇಶ (ಕಲ್ಮೇಶ್ವರ) ಸಭಾ ಭವನ ದುರಸ್ತಿ ಕಾಮಗಾರಿ ಹಾಗೂ ಚಿಂಚಲಿ ಗ್ರಾಮದಲ್ಲಿನ ರಂಗಮಂದಿರ ನಿರ್ಮಾಣ ಕಾಮಗಾರಿಗಳಲ್ಲಿ ಹಣ ದುರುಪಯೋಗಪಡಿಸಿಕೊಂಡಿರುತ್ತಾರೆಂಬ ಆರೋಪಕ್ಕೆ ಸಂಬಂಧಪಟ್ಟಂತೆ ಈ ಕೆಳಕಂಡ ಅಧಿಕಾರಿಗಳ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಚೇರಿಯು ತನಿಖೆ ನಡೆಸಿ ಲೋಕಾಯುಕ್ತ ಕಾಯ್ದೆ ಕಲಂ 12(3)ರ ಅನುಸಾರ ಸರ್ಕಾರಕ್ಕೆ ಸಲ್ಲಿಸಿದ್ದ ವರದಿಯಲ್ಲಿ, ಸದರಿಯವರುಗಳ ವಿರುದ್ಧದ ಆರೋಪಗಳು ಮೇಲ್ನೋಟಕ್ಕೆ ನಿಜವೆಂದು ಕಂಡು ಬಂದ ಹಿನ್ನೆಲೆಯಲ್ಲಿ, ಸದರಿಯವರ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರಂತೆ ನಡೆಸಲು ಸದರಿ ನಿಯಮಗಳ ನಿಯಮ 14(ಎ) ರನ್ವಯ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರವರಿಗೆ ವಹಿಸಲಾಗಿತ್ತು:-

1. ಶ್ರೀ ಜೆ.ಕೆ.ಬಾಳುಸ, ಸಹಾಯಕ ಇಂಜಿನಿಯರ್-2, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಗದಗ.
2. ಶ್ರೀ ಯು.ಹೆಚ್.ಮಂಡಿಸೊಪ್ಪಿ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಗದಗ.

ಸದರಿ ಆದೇಶದ ಅನುಸಾರ ಮಾನ್ಯ ಉಪಲೋಕಾಯುಕ್ತ-1ರವರು ಅಪರ ನಿಬಂಧಕರು, ವಿಚಾರಣೆಗಳು-9 ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿರುತ್ತಾರೆ. ಅದರಂತೆ ವಿಚಾರಣಾಧಿಕಾರಿಯವರು ಆಪಾದಿತ ಅಧಿಕಾರಿಗಳ ವಿರುದ್ಧದ ಆರೋಪಗಳ ಬಗ್ಗೆ ವಿವರವಾಗಿ ವಿಚಾರಣೆ ನಡೆಸಿ ವರದಿಯನ್ನು ಮಾನ್ಯ ಉಪಲೋಕಾಯುಕ್ತ-1ರವರಿಗೆ ದಿನಾಂಕ 11.07.2018 ರಂದು ಸಲ್ಲಿಸಿದ್ದು, ಮಾನ್ಯ ಉಪ ಲೋಕಾಯುಕ್ತ-1ರವರು ವಿಚಾರಣಾ ವರದಿಯನ್ನು ಪರಿಶೀಲಿಸಿ, ಇಲಾಖಾ ವಿಚಾರಣೆಯನ್ನು ಸಮರ್ಪಕವಾಗಿ ನಡೆಸಿರುವುದರಿಂದ ವಿಚಾರಣಾ ವರದಿಗೆ ಸಹಮತಿಸಿ ಆರೋಪದ ಗಂಭೀರತೆಗೆ ಅನುಗುಣವಾಗಿ ದಂಡನೆಯನ್ನು ವಿಧಿಸಲು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ದಿನಾಂಕ 16.07.2018 ರ ವರದಿಯಲ್ಲಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣಾ ವರದಿ ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಿರುತ್ತದೆ. ಪ್ರಕರಣದಲ್ಲಿ ಭಾಗಿಯಾಗಿರುವ ಮೇಲ್ಕಂಡ ಇಬ್ಬರು ಆಪಾದಿತರ ಪೈಕಿ ಶ್ರೀ ಜೆ.ಕೆ.ಬಾಳುಸ, ಅಂದಿನ ಸಹಾಯಕ ಇಂಜಿನಿಯರ್-2, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಗದಗ ಇವರು ಸರ್ಕಾರಿ ಸೇವೆಯಿಂದ ನಿವೃತ್ತಿ ಹೊಂದಿರುವುದರಿಂದ ಸದರಿಯವರ ವಿರುದ್ಧ ಮಾನ್ಯ ಉಪ ಲೋಕಾಯುಕ್ತ-1ರವರ ಶಿಫಾರಸ್ಸು / ವಿಚಾರಣಾ ವರದಿಯನ್ವಯ ಕ್ರಮವಹಿಸಲು ಪ್ರಸ್ತಾವನೆಯನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ದಿನಾಂಕ: 31.07.2018ರ ಅನಧಿಕೃತ ಟಿಪ್ಪಣಿಯೊಂದಿಗೆ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ಕಳುಹಿಸಲಾಗಿರುತ್ತದೆ.

ಇನ್ನುಳಿದಂತೆ ಪ್ರಕರಣದಲ್ಲಿ ಭಾಗಿಯಾಗಿರುವ ಮತ್ತೊಬ್ಬ ಆಪಾದಿತರಾದ ಶ್ರೀ ಯು.ಹೆಚ್.ಮಂಡಿಸೊಪ್ಪಿ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಗದಗ ಇವರ ವಿರುದ್ಧದ ಆರೋಪ ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿರುವುದರಿಂದ ವಿಚಾರಣಾ ವರದಿಯನ್ನು ಆಧರಿಸಿ ಕ್ರಮ ಕೈಗೊಳ್ಳುವ ಪೂರ್ವದಲ್ಲಿ ಸದರಿಯವರಿಗೆ ಮಾನ್ಯ ಉಪ ಲೋಕಾಯುಕ್ತ-1ರವರ ಶಿಫಾರಸ್ಸು ಹಾಗೂ ವಿಚಾರಣಾ ವರದಿಯ ಪ್ರತಿಯನ್ನು ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ದಿನಾಂಕ. 31.07.2018ರಂದು 2ನೇ ಕಾರಣ ಕೇಳುವ ನೋಟೀಸಿನೊಂದಿಗೆ ಜಾರಿ ಮಾಡಲಾಗಿತ್ತು.

ಪ್ರಕರಣದಲ್ಲಿ ಆಪಾದಿತರುಗಳ ವಿರುದ್ಧ ಮಾಡಲಾದ ಆರೋಪಗಳು ಈ ಕೆಳಕಂಡತಿವೆ:

1) ಚಿಂಚಲಿ ಗ್ರಾ.ಪಂ. ವ್ಯಾಪ್ತಿಯ ಕಲ್ಲೂರು-ಯತ್ನಹಳ್ಳಿ ರಸ್ತೆ ಸುಧಾರಣಾ ಕಾಮಗಾರಿ ಕೈಗೊಂಡು ಅದರಲ್ಲಿ ಬಳಸಲಾಗಿರುವ 2ನೇ ದರ್ಜೆಯ ಜಲ್ಲಿ ಅಂಶದ ಕಾಮಗಾರಿಯಲ್ಲಾಗಿರುವ ಕೊರತೆಯ ಆರ್ಥಿಕ ಪ್ರಮಾಣದ ಮೊತ್ತ ರೂ.60,206/-

2) ಚಿಂಚಲಿ ಗ್ರಾ.ಪಂ.ವ್ಯಾಪ್ತಿಯ ಕಲ್ಲೂರು ಗ್ರಾಮದ ಅಂಬೇಡ್ಕರ್ ಭವನದ ಹತ್ತಿರ ರಂಗ ಮಂದಿರ ನಿರ್ಮಾಣ ಕಾಮಗಾರಿ ಹಳೆಯ ಅಪೂರ್ಣ ಕಟ್ಟಡದ ಅಭಿವೃದ್ಧಿ ಕಾಮಗಾರಿಯಾಗಿದ್ದು ಸದರಿ ಕಾಮಗಾರಿಯ ಕಾರ್ಯಾದೇಶದಲ್ಲಿ ಅವಕಾಶ ಮಾಡಿರುವಂತೆ ಕಾಮಗಾರಿ ಕೈಗೊಳ್ಳದೇ ಕಾರ್ಯಾದೇಶದಲ್ಲಿರುವ ಅಂಶಗಳನ್ನು ಅಳತೆ ಪುಸ್ತಕದಲ್ಲಿ ನಮೂದಿಸಿ ತಪ್ಪೆಸಗಿದ್ದು, ಇದರಿಂದ ಲೆಕ್ಕಾಚಾರದ ಪ್ರಕಾರ 2ಡಿ-2 ಬಾಗಿಲ ಶೆಟರ್ ಗಳು ಮತ್ತು 4ಡಬ್ಲ್ಯು 1 ಕಿಟಕಿ ಶಟ್ಟರ್ ಗಳು ಮತ್ತು 4ಡಬ್ಲ್ಯು-2 ಕಿಟಕಿ ಶಟರ್ ಗಳ ಅಂಶದ ಕಾಮಗಾರಿಯಲ್ಲಾಗಿರುವ ಕೊರತೆಯ ಆರ್ಥಿಕ ಪ್ರಮಾಣ ರೂ.38,839.76.

3) ಚಿಂಚಲಿ ಗ್ರಾ.ಪಂ. ವ್ಯಾಪ್ತಿಯ ರಂಗಮಂದಿರ ನಿರ್ಮಾಣ ಕಾಮಗಾರಿ ಹೊಸ ಹಾಗೂ ಅಪೂರ್ಣ ಕಾಮಗಾರಿಯಾಗಿದ್ದು, ಸದರಿ ಕಾಮಗಾರಿಯ ಅಂದಾಜಿನಲ್ಲಿ ಅವಕಾಶ ಮಾಡಿರುವಂತೆ ಕಾಮಗಾರಿ ಕೈಗೊಳ್ಳದೇ ಅಂದಾಜಿನಲ್ಲಿರುವ ಅಂಶಗಳನ್ನು ಅಳತೆ ಪುಸ್ತಕದಲ್ಲಿ ನಮೂದಿಸಿ ತಪ್ಪೆಸಗಿರುವುದು.

ಮೇಲಿನ ಆರೋಪಗಳಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆಯಲ್ಲಿ ವಿಚಾರಣಾಧಿಕಾರಿಯವರು ಇಬ್ಬರು ಸಾಕ್ಷಿಗಳ ಹೇಳಿಕೆಗಳು, ಶಿಸ್ತು ಪ್ರಾಧಿಕಾರ ಹಾಗೂ ಆಪಾದಿತರು ಸಲ್ಲಿಸಿದ ಹಲವಾರು ದಾಖಲೆಗಳನ್ನು ಪರಿಶೀಲಿಸಿದ್ದಾರೆ. ದಾಖಲೆಗಳು ಮತ್ತು ಸಾಕ್ಷಿಗಳ ಪರಿಶೀಲನೆಯ ನಂತರ ಆಪಾದಿತರ ವಿರುದ್ಧದ ಆರೋಪವು ಸಾಬೀತಾಗಿದೆ ಎಂದು ನಿರ್ಣಯಿಸಿರುತ್ತಾರೆ.

ವಿಚಾರಣಾ ವರದಿ ಹಾಗೂ ಮಾನ್ಯ ಉಪ ಲೋಕಾಯುಕ್ತರವರ ಶಿಫಾರಸ್ಸಿಗೆ ಪ್ರತಿಯಾಗಿ ಆಪಾದಿತ ಅಧಿಕಾರಿಯಾದ ಶ್ರೀ ಯು.ಹೆಚ್.ಮಂಡಿಸೊಪ್ಪಿ ರವರು ಮೇಲೆ ಕ್ರಮ ಸಂಖ್ಯೆ (5)ರಲ್ಲಿ ಓದಲಾದಂತೆ ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ ಕಲ್ಲೂರ ಯತ್ನಳ್ಳಿ ರಸ್ತೆ ಸುಧಾರಣೆ ಕಾಮಗಾರಿಯು 2013-14ನೇ ಸಾಲಿನ 3054 ಟಾಸ್ಕ್ ಫೋರ್ಸ್ ಯೋಜನೆ ಅಡಿಯಲ್ಲಿ ಕೈಗೊಳ್ಳಲಾಗಿದ್ದು, ಸದರಿ ಕಾಮಗಾರಿಗೆ ರೂ.4,03,000/-ಅನುದಾನ ಮಂಜೂರಾಗಿದ್ದು, ಅಂದಾಜು ಪತ್ರಿಕೆಯಂತೆ ಕಾಮಗಾರಿ ನಿರ್ವಹಿಸಿದ್ದು, ಸದರಿ ಕಾಮಗಾರಿಯು ದಿನಾಂಕ: 16.3.2014 ರಂದು ಪೂರ್ಣಗೊಂಡಿರುತ್ತದೆಂದು, ಚಿಂಚಲಿ ಗ್ರಾಮದಲ್ಲಿ ಕಲ್ಲಿನ ಖಡಿ ಕ್ವಾರಿ ಇರುವುದರಿಂದ ಹೆಚ್ಚು ಸಾಮರ್ಥ್ಯವುಳ್ಳ ಘನ ವಾಹನಗಳ ಸಂಚಾರ ನಿರಂತರ ಇದ್ದು, ರೈತರುಗಳ ಚಕ್ಕಡಿ ಟ್ರಾಕ್ಟರ್ ಮುಂತಾದ ವಾಹನಗಳ ದಟ್ಟಣೆಯಿಂದ ರಾತ್ರಿ ಹುಬಳ್ಳಿ ಮುಂತಾದ ಊರುಗಳಿಗೆ ಸಂಚಾರದಿಂದಾಗಿ ನಿರ್ವಹಿಸಿದ ರಸ್ತೆಯ ಖಡಿಗಳು ಮೋರಂಗಳು ಸ್ಥಾನಪಲ್ಲಟಗೊಂಡಿರುತ್ತದೆಂದೂ ನಾಮಫಲಕವು ಬಾಗಿದ್ದರಿಂದ ಅದನ್ನು ಕಿತ್ತು ದುರಸ್ತಿಗೊಳಿಸಿ ಅಳವಡಿಸಲಾಗಿದೆ.

ಅಲ್ಲದೇ, ಕಲ್ಲೂರ ಗ್ರಾಮದ ಅಂಬೇಡ್ಕರ್ ಭವನದ ಹತ್ತಿರ ಬಯಲು ರಂಗ ಮಂದಿರ ನಿರ್ಮಾಣ ಕಾಮಗಾರಿಯನ್ನು ಅಂದಾಜು ಪತ್ರಿಕೆಯಲ್ಲಿ ಉಳಿದ ಕಾಮಗಾರಿಗಳು ಪೂರ್ಣಗೊಂಡಿದ್ದು, ಕಿಟಕಿ ಬಾಗಿಲು ಪಡಕಗಳನ್ನು ಸಮೀಪದ ಅಂಗನವಾಡಿ ಕೇಂದ್ರದಲ್ಲಿ ಗುತ್ತಿಗೆದಾರರು ಇಟ್ಟಿದ್ದು, ಈಗ ಅಳವಡಿಸಲಾಗಿದೆ ಎಂದು, ಹಾಗೂ ಮಾಲತೇಶ ಸಮುದಾಯ ಭವನದ ದುರಸಿ ತ ಕಾಮಗಾರಿಯಲ್ಲಿ 16 ಕಾಲಂ ಪಾಯ ತೆಗೆದು ಬೆಡ್ ಕಾಂಕ್ರೀಟ್ ಪುಟಿಂಗ್ ಮೇಲೆ 2:1ಮೀಟರ್ ರವರೆಗೆ ಎತ್ತರದ ಕಾಂಕ್ರೀಟ್ ಅಳವಡಿಸಲಾಗಿದೆ ಎಂದು ಮತ್ತು ಮಾರುತಿ ರಂಗ ಮಂದಿರ ನಿರ್ಮಾಣ ಕಾಮಗಾರಿ ಅಂದಾಜು ಪತ್ರಿಕೆಯಲ್ಲಿನ 4 ಕಾಲಂ

ಬದಲಾಗಿ 8 ಕಾಲಂ ನಿರ್ಮಾಣ ಮಾಡಿ ಸ್ಲಾಬ್ ಕೂಡಾ ಹಾಕಲಾಗಿದೆ ಎಂದು ಅಂದಾಜು ಪತ್ರಿಕೆಗಿಂತ ಹೆಚ್ಚಿಗೆ ನಿರ್ವಹಿಸಿರುವುದಾಗಿ ತಿಳಿಸಿ, ತಮ್ಮ ವಿರುದ್ಧದ ಆರೋಪಗಳನ್ನು ಅಲ್ಲಗಳೆಯುತ್ತಾ, ತಮ್ಮನ್ನು ಇಲಾಖಾ ವಿಚಾರಣೆಯಿಂದ ಕೈಬಿಡುವಂತೆ ಕೋರಿರುತ್ತಾರೆ.

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ವಿಚಾರಣಾ ವರದಿ, ದಾಖಲೆಗಳು, ಆಪಾದಿತರ ಲಿಖಿತ ಹೇಳಿಕೆ ಹಾಗೂ ಸಾಕ್ಷಿಗಳ ಹೇಳಿಕೆಗಳನ್ನು ಪರಿಶೀಲಿಸಿದ್ದು, ಆಪಾದಿತ ಅಧಿಕಾರಿಯಾದ ಶ್ರೀ ಯು.ಹೆಚ್.ಮಂಡಿಸೊಪ್ಪಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರು ಈ ಕೆಳಕಂಡಂತೆ ಲೋಪವೆಸಗಿರುವುದು ಕಂಡುಬರುತ್ತವೆ:-

1) ಕಲ್ಲೂರು-ಯತ್ನಳ್ಳಿ ರಸ್ತೆ ಅಭಿವೃದ್ಧಿ ಕಾಮಗಾರಿಗಾಗಿ ರೂ. 4.03ಲಕ್ಷ ಅಂದಾಜು ಮೊತ್ತಕ್ಕೆ ಅನುಮೋದನೆಯಾಗಿದ್ದು, ಕ್ರಿಯಾ ಯೋಜನೆಯ ಪ್ರಕಾರ 0.075 ಮೀ. ದಪ್ಪದ ಗ್ರೇಡ್ -2ಮೆಟಲ್ ನ ಬದಲಾಗಿ 0,065 ಮೀ. ಗ್ರೇಡ್-2 ಮೆಟಲ್ ಅಳವಡಿಸಿದ್ದರೂ. ಅಳತೆ ಪುಸ್ತಕದಲ್ಲಿ ಅಂದಾಜು ಪತ್ರಿಕೆಯಲ್ಲಿನ ಅಳತೆಗಳನ್ನು ನಮೂದಿಸಿರುವುದು.

2) ಕಲ್ಲೂರು ಗ್ರಾಮದಲ್ಲಿ ಅಂಬೇಡ್ಕರ್ ಭವನದ ಹತ್ತಿರ ರಂಗಮಂದಿರ ನಿರ್ಮಾಣಕ್ಕಾಗಿ ಅಂದಾಜು ರೂ.1.15 ಲಕ್ಷಗಳಿಗೆ ಅನುಮೋದನೆಯಾಗಿದ್ದು, ಕ್ರಿಯಾ ಯೋಜನೆಯ ಪ್ರಕಾರ ಒಂದು ಡಿ1 ಬಾಗಿಲು, 4 ಡಿ2 ಬಾಗಿಲು ಹಾಗು 6 ಡಬ್ಲ್ಯು1 ಮತ್ತು 4 ಡಬ್ಲ್ಯು2 ಕಿಟಕಿ ಬಾಗಿಲುಗಳಿಗೆ ಅನುಮೋದನೆಯಾಗಿದ್ದರೂ ಒಂದು ಡಿ1 ಬಾಗಿಲು ಎರಡು ಡಿ2 ಬಾಗಿಲುಗಳು ಹಾಗೂ ಡಬ್ಲ್ಯು-1ರ 2 ಕಿಟಕಿಗಳನ್ನು ಮಾತ್ರ ಅಳವಡಿಸಿದ್ದರೂ. ಅಳತೆ ಪುಸ್ತಕದಲ್ಲಿ ಅಂದಾಜು ಪತ್ರಿಕೆಯಲ್ಲಿನ ಅಳತೆಗಳನ್ನು ನಮೂದಿಸಿರುವುದು.

3) ಚಿಂಚಲಿ ಗ್ರಾಮದಲ್ಲಿ ರಂಗಮಂದಿರ ನಿರ್ಮಾಣಕ್ಕಾಗಿ ರೂ.1.34 ಲಕ್ಷಗಳಿಗೆ ಮಂಜೂರಾಗಿದ್ದು, ಕ್ರಿಯಾ ಯೋಜನೆಯ ಪ್ರಕಾರ 4 ಆರ್‌ಸಿಸಿ ಕಾಲಮ್ 4 ರೂಫ್ ಬೀಮ್ ಮತ್ತು ಒಂದು ರೂಫ್ ಸ್ಲ್ಯಾಬ್ ಅಳವಡಿಸಬೇಕಿದ್ದರೂ 8 ಕಾಲಂ 4 ಪ್ಲಿಂತ್ ಬೀಮ್ ಮತ್ತು ಲಿಂಟೆಲ್ ಬೀಮ್ ಗಳನ್ನು ಅಳವಡಿಸಿದ್ದರೂ. ಅಳತೆ ಪುಸ್ತಕದಲ್ಲಿ ಅಂದಾಜು ಪತ್ರಿಕೆಯಲ್ಲಿನ ಅಳತೆಗಳನ್ನು ನಮೂದಿಸಿರುವುದು;

ಮೇಲೆ ತಿಳಿಸಿರುವಂತೆ ಆಪಾದಿತ ಅಧಿಕಾರಿಯು ಮಂಜೂರಾದ ಅಂದಾಜು ಪಟ್ಟಿ ಹಾಗೂ ಕ್ರಿಯಾ ಯೋಜನೆಯಂತೆ ಕಾಮಗಾರಿ ನಿರ್ವಹಿಸದಿದ್ದರೂ ಸಹ ಅಳತೆ ಪುಸ್ತಕದಲ್ಲಿ ಅಂದಾಜು ಪಟ್ಟಿಯಲ್ಲಿರುವಂತೆ ಅಳತೆಗಳನ್ನು ನಮೂದಿಸಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿ ಗಂಭೀರ ಸ್ವರೂಪದ ಕರ್ತವ್ಯ ಲೋಪ / ದುರ್ನಡತೆ ಎಸಗಿರುವುದು ಸ್ಪಷ್ಟವಾಗಿರುತ್ತದೆ. ಹಾಗಾಗಿ ಸದರಿಯವರ ಲಿಖಿತ ಹೇಳಿಕೆಯಲ್ಲಿ ಪರಿಗಣನಾರ್ಹವಾದ ಅಂಶಗಳು ಕಂಡುಬರುವುದಿಲ್ಲ. ಅಲ್ಲದೆ ಸದರಿ ಆಪಾದಿತ ಅಧಿಕಾರಿಯ ವಿರುದ್ಧದ ಆರೋಪವು ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿರುವ ಹಿನ್ನೆಲೆಯಲ್ಲಿ ಸಾಬೀತಾದ ಆರೋಪದ

ಗಂಭೀರತೆಗೆ ಅನುಗುಣವಾಗಿ ಸದರಿಯವರಿಗೆ ದಂಡನೆಯನ್ನು ವಿಧಿಸಲು ಸರ್ಕಾರವು ತೀರ್ಮಾನಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ. ಗ್ರಾಅಪ 62 ಇಎಸ್‌ಕ್ಯೂ 2018, ಬೆಂಗಳೂರು, ದಿನಾಂಕ. 09.01.2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಯು.ಹೆಚ್. ಮಂಡಿಸೊಪ್ಪಿ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಗದಗ (ಹಾಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಯಲಬುರ್ಗಾ) ಇವರ ವಿರುದ್ಧದ ಸಾಬೀತಾದ ಆರೋಪದ ಗಂಭೀರತೆಗೆ ಅನುಗುಣವಾಗಿ ಸದರಿಯವರಿಂದ ಸರ್ಕಾರಕ್ಕೆ ಉಂಟಾದ ಆರ್ಥಿಕ ನಷ್ಟ ರೂ. 67,751/- ಗಳನ್ನು ಸದರಿಯವರ ವೇತನ ಮತ್ತು ಇತರೆ ಸೌಲಭ್ಯಗಳಿಂದ ವಸೂಲು ಮಾಡುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಮೇಲ್ಕಂಡಂತೆ ಸದರಿ ಆಪಾದಿತ ಅಧಿಕಾರಿಯಿಂದ ಸರ್ಕಾರಕ್ಕೆ ಉಂಟಾದ ನಷ್ಟವನ್ನು ವಸೂಲಿ ಮಾಡಲು ಜರೂರು ಕ್ರಮ ತೆಗೆದುಕೊಳ್ಳಬೇಕೆಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಗದಗ ಇವರಿಗೆ ಸೂಚಿಸಿದೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್.ರಂಗನಗೌಡ), 09/01/2019
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಎಂ.ಎಸ್.ಬಿಲ್ಡಿಂಗ್, ಬೆಂಗಳೂರು.
3. ಅಪರ ನಿಬಂಧಕರು ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಗದಗ / ಹಾವೇರಿ- (ನೋಂದಾಯಿತ ಅಂಚೆ ಮುಖಾಂತರ).
5. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
6. ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಗದಗ. (ನೋಂದಾಯಿತ ಅಂಚೆ ಮುಖಾಂತರ).
7. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಗದಗ – (ನೋಂದಾಯಿತ ಅಂಚೆ ಮುಖಾಂತರ).
8. ಶ್ರೀ ಯು.ಹೆಚ್.ಮಂಡಿಸೊಪ್ಪಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಯಲಬುರ್ಗಾ – (ನೋಂದಾಯಿತ ಅಂಚೆ ಮುಖಾಂತರ).

9. ನಿರ್ದೇಶಕರು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
10. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ (ಸೇವೆಗಳು-ಎ & ಸಿ).
11. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
12. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ ಉಪ ಕಾರ್ಯದರ್ಶಿ (ಆಡಳಿತ) ಇವರ ಆಪ್ತ ಕಾರ್ಯದರ್ಶಿ/ ಆಪ್ತ ಸಹಾಯಕರಿಗೆ.
13. ಮಾಹಿತಿ ಕೇಂದ್ರ : ಹೆಚ್ಚುವರಿ ಪ್ರತಿ:ರಕ್ಷಾ ಕಡತ : ಕಂಪ್ಯೂಟರ್ ಸೆಲ್.